ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 580
2. ಸದಸ್ಯರ ಹೆಸರು : ಶ್ರೀ ಪ್ರಕಾಶ್ ಕೆ. ರಾಥೋಡ್
3. ಉತ್ತರಿಸಬೇಕಾದ ದಿನಾಂಕ : 22/07/2019
4. ಉತ್ತರಿಸಬೇಕಾದ ಸಚಿವರು : ಮಾನ್ಯ ಸಹಕಾರ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ	ರೈತಾಪಿ ವರ್ಗದವರು ಬೆಳೆದ ಭತ್ತ ಹಾಗೂ ದ್ವಿದಳ ಧಾನ್ಯಗಳನ್ನು ಅನಧಿಕೃತ ದಲ್ಲಾಳಿಗಳು ಕಡಿಮೆ ದರದಲ್ಲಿ ಮತ್ತು ತೂಕದಲ್ಲಿ ಮೋಸ ಮಾಡಿ ಖರೀದಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.
ಆ	ಬಂದಿದ್ದಲ್ಲಿ, ಅನಧಿಕೃತ ದಲ್ಲಾಳಿಗಳನ್ನು ನಿಯಂತ್ರಿಸಲು ಸರ್ಕಾರವು ಕೈಗೊಂಡಿರುವ ಕಾನೂನು ರೀತಿಯ ಕ್ರಮಗಳೇನು (ವಿವರ ನೀಡುವುದು)	ಆದಾಗ್ಯೂ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ. ಸರ್ಕಾರವು ಕೃಷಿ ಮಾರಾಟ ರಂಗದಲ್ಲಿ ಸುಧಾರಣೆಗಳನ್ನು ತರಲು ಅಧ್ಯಯನ ನಡೆಸಿ ಕೃಷಿ ಮಾರಾಟ ನೀತಿ–2013ನ್ನು ಅಂಗೀಕರಿಸಿದ್ದು, ಆನ್‌ಲೈನ್ ಮಾರುಕಟ್ಟೆ ವ್ಯವಸ್ಥೆ ಜಾರಿಗೆ ತರುವ ಸಂಬಂಧ ಕಾಯ್ದೆಗೆ ತಿದ್ದುಪಡಿ ಮಾಡಿ ಜಾರಿಗೆ ತರಲಾಗಿದೆ. ಪ್ರಸ್ತುತ ರಾಜ್ಯದಲ್ಲಿ 162 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಕಾರ್ಯನಿರ್ವಹಿಸುತ್ತಿದ್ದು 92 ಅಧಿಸೂಚಿತ ಕೃಷಿ ಉತ್ಪನ್ನಗಳನ್ನು ಮಾರಾಟ ನಿಯಂತ್ರಣ ಕಕ್ಷೆಗೆ ಒಳಪಡಿಸಿದೆ. 160 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಆನ್‌ಲೈನ್ ವಹಿವಾಟು ಜಾರಿಯಲ್ಲಿದ್ದು ಲೈಸೆನ್ಸ್ ಪಡೆದ ಎಲ್ಲಾ ಪೇಟೆ ಕಾರ್ಯಕರ್ತರಿಗೆ ಸಂಬಂಧಿಸಿದ ವ್ಯಾಪಾರ ವಹಿವಾಟು ಎಲೆಕ್ಟ್ರಾನಿಕ್ ವೇದಿಕೆ ಮೂಲಕ ನಡೆಯುವುದರಿಂದ ಪಾರದರ್ಶಕತೆ ತರಲು ಸಹಾಯವಾಗುತ್ತದೆ. ಎಲೆಕ್ಟ್ರಾನಿಕ್ ತೂಕದ ಯಂತ್ರಗಳ ಮೂಲಕ ತೂಕ ಮಾಡಲು ಕಡ್ಡಾಯಗೊಳಿಸಲಾಗಿದೆ. ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 1966ರಡಿ ಲೈಸೆನ್ಸ್ ಪಡೆದ ಪೇಟೆಕಾರ್ಯಕರ್ತರು ಕಲಂ 8ರಲ್ಲಿ ಮಾರುಕಟ್ಟೆ ಪ್ರಾಂಗಣದ, ಮಾರುಕಟ್ಟೆ ಉಪ ಪ್ರಾಂಗಣದ, ಉಪ ಮಾರುಕಟ್ಟೆ ಪ್ರಾಂಗಣದ, ಖಾಸಗಿ ಮಾರುಕಟ್ಟೆ

...2

		ಪ್ರಾಂಗಣದ ಅಥವಾ ರೈತ-ಗ್ರಾಹಕ ಮಾರುಕಟ್ಟೆ ಪ್ರಾಂಗಣದ ಹೊರತಾಗಿ ಯಾವುದೇ ಸ್ಥಳವನ್ನು ಅಧಿಸೂಚಿತ ಕೃಷಿ ಉತ್ಪನ್ನಗಳ ಖರೀದಿಗಾಗಿ ಅಥವಾ ಮಾರಾಟಕ್ಕಾಗಿ ಉಪಯೋಗಿಸುವಂತಿಲ್ಲ ಎಂದು ನಿರೂಪಣೆ ಇರುತ್ತದೆ. ದಲ್ಲಾಲರು ಪರವಾನಗಿ ಪಡೆಯಲು ಅರ್ಜಿಯೊಂದಿಗೆ ವ್ಯಾಪಾರ ಸ್ಥಳದ ಹೆಸರು ಮತ್ತು ವಿಳಾಸವನ್ನು ನಮೂದಿಸಲು ಕಾಯ್ದೆಯಲ್ಲಿ ನಿಗಧಿಪಡಿಸಿದೆ ಪ್ರಾಂಗಣದಲ್ಲಿ ಅವಕವಾಗುವ ಕೃಷಿ ಉತ್ಪನ್ನಗಳನ್ನು ಪ್ರಾಂಗಣದ ದ್ವಾರದಲ್ಲಿ ಗೇಟ್‌ಪಾಸ್ ಎಂಟ್ರಿ ಮಾಡಿ ರೈತರ/ದಲ್ಲಾಲರ ವಿವರಗಳನ್ನು ದಾಖಲಿಸಲು ಕ್ರಮ ವಹಿಸಲಾಗಿದೆ. ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 1966ರ ಕಲಂ 75 ರಲ್ಲಿ ಕೃಷಿ ಉತ್ಪನ್ನಗಳ ಮಾರಾಟದ ಮೌಲ್ಯದ ಪಾವತಿ ಬಗ್ಗೆ ನಿರೂಪಣೆ ಇರುತ್ತದೆ ಹಾಗೂ ಕಲಂ 78, 78-ಎ ರಡಿ ಕಮೀಷನ್ ಏಜೆಂಟ್‌ರ ಕಮೀಷನ್ ಮತ್ತು ಹೊಣೆಗಾರಿಕೆಯನ್ನು ನಿರ್ದಿಷ್ಟಪಡಿಸಿದ್ದು, ಮಾರುಕಟ್ಟೆ ಸಮಿತಿಗಳಿಂದ ಲೈಸನ್ಸ್ ಪಡೆದು ಕಾರ್ಯನಿರ್ವಹಿಸಲಾಗುತ್ತಿದೆ. ರೈತರಿಗೆ ತಮ್ಮ ಉತ್ಪನ್ನಗಳು ಮಾರಾಟವಾದ ದಿನದಂದೇ ಮಾರಾಟದ ಬೆಲೆ ಪಾವತಿ, ಸಮಿತಿಯ ಉಪ ನಿಯಮಗಳಲ್ಲಿ ಅವಕಾಶಿಸಿರುವಂತೆ ಮಾರಾಟದ ನಂತರದಲ್ಲಿ ತಕ್ಕಪಟ್ಟಿ ನೀಡುವಿಕೆ, ಮುಂತಾದ ಕ್ರಮಗಳನ್ನು ಕೈಗೊಳ್ಳಲು ಕಾನೂನು ಜಾರಿಕೋಶದ ಅಧಿಕಾರಿಗಳು/ಜಿಲ್ಲಾ ಉಪ/ಸಹಾಯಕ ನಿರ್ದೇಶಕರುಗಳಿಗೆ ಕಟ್ಟುನಿಟ್ಟಿನ ನಿಯಂತ್ರಣಾತ್ಮಕ ಕ್ರಮಗಳನ್ನು ಕೈಗೊಳ್ಳಲು ಸುತ್ತೋಲೆ ನಿರ್ದೇಶನಗಳನ್ನು ನೀಡಲಾಗಿದೆ.
ಇ	ಇಲ್ಲಿಯವರೆಗೆ ಅನಧಿಕೃತ ದಲ್ಲಾಲಿಗಳ ಮೇಲೆ ದಾಖಲಿಸಿರುವ ಪ್ರಕರಣಗಳ ವಿವರ ಒದಗಿಸುವುದು ಮತ್ತು ಪ್ರಕರಣಗಳಿಗೆ ಸಂಬಂಧಿಸಿದಂತೆ ಕಾನೂನಾತ್ಮಕ ಕ್ರಮ ಕೈಗೊಂಡಿರುವ ಬಗ್ಗೆ ವಿವರ ಒದಗಿಸುವುದು?	ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಅನಧಿಕೃತವಾಗಿ ಲೈಸೆನ್ಸ್ ಪಡೆಯದೆ ಕಾರ್ಯನಿರ್ವಹಿಸುತ್ತಿರುವ ಪ್ರಕರಣಗಳು ದಾಖಲಾಗಿರುವುದಿಲ್ಲ.

ಸಂಖ್ಯೆ: ಸಇ 102 ಎಂಆರ್‌ಇ 2019

(ಬಂಡೆಪ್ಪ ಖಾಶೆಂಪೂರ)
ಸಹಕಾರ ಸಚಿವರು.

ಅನುಬಂಧ- 1

ಶ್ರೀ ಬಿ. ಶ್ರೀರಾಮಲು , ಮಾನ್ಯ ವಿಧಾನ ಸಭಾ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ: 2082

ಹೈದರಾಬಾದ್-ಕರ್ನಾಟಕ ಪ್ರದೇಶದ ಖಾಲಿಯಿರುವ ಹುದ್ದೆಗಳ ಮಾಹಿತಿ.

ಆಡಳಿತ ಇಲಾಖೆಯ ಹೆಸರು:-ಕೃಷಿ ಇಲಾಖೆ

ಕ್ರ ಸಂ	ಹುದ್ದೆವಾರು ಹೆಸರು	ಜಿಲ್ಲಾವಾರು ವಿವರ																	
		ಬಳ್ಳಾರಿ ಜಿಲ್ಲೆ			ಕಲಬುರಗಿ ಜಿಲ್ಲೆ			ಕೊಪ್ಪಳ ಜಿಲ್ಲೆ			ಬೀದರ್ ಜಿಲ್ಲೆ			ರಾಯಚೂರು ಜಿಲ್ಲೆ			ಯಾದಗಿರಿ ಜಿಲ್ಲೆ		
		ಮಂ	ಭರ್ತಿ	ಖಾಲಿ	ಮಂ	ಭರ್ತಿ	ಖಾಲಿ	ಮಂ	ಭರ್ತಿ	ಖಾಲಿ	ಮಂ	ಭರ್ತಿ	ಖಾಲಿ	ಮಂ	ಭರ್ತಿ	ಖಾಲಿ	ಮಂ	ಭರ್ತಿ	ಖಾಲಿ
1	2	3			4			5			6			7			8		
1	ಸಹಾಯಕ ಕೃಷಿ ನಿರ್ದೇಶಕರು	14	9	5	15	9	6	12	7	5	10	7	3	11	5	6	8	4	4
2	ಸಹಾಯಕ ಕೃಷಿ ನಿರ್ದೇಶಕರು (ರೈತ ಮಹಿಳೆ)	2	1	1	2	1	1	2	1	1	2	0	2	2	1	1	0	0	0
3	ಆಡಳಿತಾಧಿಕಾರಿ	1	0	1	1	0	1	1	0	1	1	0	1	1	0	1	0	0	0
4	ಕೃಷಿ ಅಧಿಕಾರಿ	63	46	17	90	57	33	52	36	16	50	29	21	62	50	12	36	22	4
6	ಆಡಳಿತ ಸಹಾಯಕ	2	2	0	2	2	0	1	1	0	1	0	1	1	1	0	1	1	0
7	ಸಹಾಯಕ ಕೃಷಿ ಅಧಿಕಾರಿ	85	51	34	102	61	41	61	42	19	79	61	18	85	65	20	54	29	25
8	ಅಧೀಕ್ಷಕರು	14	12	2	13	13	0	10	5	5	11	9	2	11	10	1	7	4	3
9	ಪ್ರಥಮ ದರ್ಜೆ ಸಹಾಯಕ	20	18	2	21	20	1	15	15	0	16	12	4	16	14	2	9	6	3
10	ಶೀಘ್ರಲಿಪಿಗಾರರು	1	1	0	1	1	0	1	1	0	1	1	0	1	0	1	1	0	1
11	ದ್ವಿತೀಯ ದರ್ಜೆ ಸಹಾಯಕ	23	10	13	23	22	1	14	11	3	19	19	0	19	14	5	12	6	6
12	ಬೆರಳಚ್ಚುಗಾರರು	13	2	11	15	8	7	11	1	10	10	3	7	10	0	10	6	2	4
13	ವಾಹನ ಚಾಲಕರು	14	1	13	13	1	12	9	2	7	11	2	9	10	2	8	7	0	7
14	ನಕ್ಷೆಗಾರರು	0	0	0	1	1	0	0	0	0	0	0	0	0	0	0	0	0	0
15	ರೇಖಾಗಾರರು	7	3	4	4	1	3	2	2	0	2	2	0	4	3	1	1	1	0
16	ಕೃಷಿ ಉಪಕರಣ ಮೇಲ್ವಿಚಾರಕರು	1	0	1	0	0	0	0	0	0	0	0	0	0	0	0	0	0	0
17	ಪ್ರಯೋಗಶಾಲಾ ಸಹಾಯಕ	2	1	1	6	2	4	8	2	6	0	0	0	0	0	0	0	0	0
18	ಪ್ರಯೋಗಶಾಲಾ ಪರಿಚಾರಕ	3	2	1	12	7	5	15	2	13	0	0	0	0	0	0	0	0	0
19	ಬಾಣಸಿಗ	1	1	0	1	0	1	1	0	1	1	0	1	1	1	0	0	0	0
20	ಗ್ರೂಪ್-ಡಿ	37	24	13	38	14	24	25	12	13	27	16	11	24	18	6	14	4	10
	ಒಟ್ಟು	303	184	119	360	220	140	240	140	100	241	161	80	258	184	74	156	79	77

ಅನುಬಂಧ-2

ಖಾಲಿ ಹುದ್ದೆಗಳ ಮಾಹಿತಿ

		ಕಲಬುರುಗಿ			ಬೀದರ್			ರಾಯಚೂರು			ಕೊಪ್ಪಳ			ಬಳ್ಳಾರಿ			ಯಾದಗಿರಿ		
ಕ್ರಸಂ	ಹುದ್ದೆಗಳ ವಿವರ	ಮಂ	ಭರ್ತಿ	ಖಾಲಿ	ಮಂ	ಭರ್ತಿ	ಖಾಲಿ	ಮಂ	ಭರ್ತಿ	ಖಾಲಿ	ಮಂ	ಭರ್ತಿ	ಖಾಲಿ	ಮಂ	ಭರ್ತಿ	ಖಾಲಿ	ಮಂ	ಭರ್ತಿ	ಖಾಲಿ
1	ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ	1	1	0	1	1	0	1	0	1	1	1	0	1	0	1	1	1	0
2	ವಲಯ ಆರಣ್ಯ ಅಧಿಕಾರಿ	1	1	0	1	1	0	1	1	0	1	1	0	1	1	0	1	1	0
3	ಉಪ ವಲಯ ಅರಣ್ಯ ಅಧಿಕಾರಿ	2	1	1	2	2	0	2	1	1	2	2	0	2	2	0	2	2	0
4	ಪ್ರಥಮ ದರ್ಜೆಸಹಾಯಕ (ಅರಣ್ಯ)	1	1	0	1	0	1	1	1	0	1	1	0	1	1	0	1	0	1
5	ಹಿರಿಯ ಸಹಾಯಕ ತೋಟಗಾರಿಕೆ ಅದಿಕಾರಿ	0	0	0	0	0	0	0	0	0	0	0	0	0	0	0	0	0	0
6	ಸಹಾಯಕ ತೋಟಗಾರಿಕೆ ಅಧಿಕಾರಿ	1	1	0	1	1	0	1	0	1	1	0	1	1	0	1	1	0	1
7	ತೋಟಗಾರಿಕೆ ಸಹಾಯಕ	2	1	1	2	0	2	2	0	2	2	0	2	2	0	2	2	0	2
8	ಪ್ರಥಮ ದರ್ಜೆ ಸಹಾಯಕರು(ತೋಟಗಾರಿಕೆ)	0	0	0	0	0	0	0	0	0	0	0	0	0	0	0	0	0	0
	ಒಟ್ಟು	8	6	2	8	5	3	8	3	5	8	5	3	8	4	4	8	4	4

ಆಯುಕ್ತರು
ಜಲಾನಯನ ಅಭಿವೃದ್ಧಿ ಇಲಾಖೆ,
ಬೆಂಗಳೂರು